O.S. No.- 262/2021
PW-1

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ (ಸಂಚಾರಿ ನ್ಯಾಯಾಲಯ) ಕಾರಟಗಿ .**

**ಸಾಕ್ಷಿಯನ್ನು ದಿನಾಂಕ- 21.11.2023 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.**

**ಪಾಟೀಸವಾಲು- ಶ್ರೀ ಎಮ್ ಎಸ್ ಕೆ ಪ್ರತಿವಾದಿಯರ ಪರ ವಕೀಲರಿಂದ-**

2. ನನ್ನ ಮದುವೆ ಆಗಿ ಸುಮಾರು 10 ವರ್ಷ ಆಗಿರುತ್ತದೆ. ನನ್ನ ತವರು ಮನೆ ಕುಷ್ಟಗಿ ತಾಲೂಕಿನ ಮೆಣಸಗೆರೆ ಗ್ರಾಮವಾಗಿರುತ್ತದೆ. ನನ್ನ ಕುಟುಂಬಕ್ಕೂ ಮತ್ತು ನನ್ನ ಗಂಡನ ಕುಟುಂಬಕ್ಕೂ ಮೊದಲಿನಿಂದ ಪರಿಚಯ ಇರಲಿಲ್ಲ. ಆದ್ದರಿಂದ ಮದುವೆ ಆದ ನಂತರ ನನ್ನ ಮತ್ತು ನನ್ನ ಗಂಡನ ಕುಟುಂಬದ ನಡುವೆ ಸಂಬಂದ ಬೆಳೆದಿರುತ್ತದೆ. ಆದ್ದರಿಂದ ನನ್ನ ಗಂಡನ ಕುಟುಂಬದ ಬಗ್ಗೆ ನನ್ನ ಮದುವೆ ಆದ ನಂತರ ನನಗೆ ಮಾಹಿತಿ ಬಂದಿರುತ್ತದೆ.

3. ಪ್ರತಿವಾದಿಗಳು ಮನೆಗೆ ಸಂಬಂದಪಟ್ಟಂತೆ ನಮ್ಮ ಜೊತೆ ಜಗಳ ಮಾಡಿದ ಕಾರಣ ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿ ಸಂಖ್ಯೆ 51 ಆಗಿರುತ್ತದೆ. ದಾವಾ ಆಸ್ತಿ ನನ್ನ ಗಂಡನ ತಂದೆಯ ಅಣ್ಣನ ಆಸ್ತಿಯಾಗಿರುತ್ತದೆ. ಅವನ ಹೆಸರು ಮುದುಕಪ್ಪ. ಆತನಿಗೆ ಹೆಂಡತಿ ಮಕ್ಕಳು ಇರುತ್ತಾರೆ. ಅವನ ಮಗನ ಹೆಸರು ಮುದುಕಪ್ಪ. 4 ನೇ ಪ್ರತಿವಾದಿ ನನ್ನ ಅತ್ತೆ, ಆಕೆಗೆ 15 ಜನ ಮಕ್ಕಳು. ಆಕೆಗೆ 10 ಜನ ಹೆಣ್ಣುಮಕ್ಕಳು ಮತ್ತು 5 ಜನ ಗಂಡುಮಕ್ಕಳು. ನನ್ನ ಗಂಡ ಆಕೆಗೆ ನಾಲ್ಕನೇಯ ಮಗ ಆಗಿರುತ್ತಾನೆ. ನನ್ನ ಗಂಡನ ತಂದೆ ಮತ್ತು ಆತನ ಅಣ್ಣ ಇಬ್ಬರ ನಡುವೆ ಭಾಗ ಆಗಿರುತ್ತದೆ. ನಾವು ಮುದುಕಪ್ಪ (ನನ್ನ ಗಂಡನ ತಂದೆಯ ಅಣ್ಣ) ಈತನ ಆಸಿತಯನ್ನು ನಾವು ತೆಗೆದುಕೊಂಡಿರುತ್ತೇವೆ. ಅವರಿಬ್ಬರು ಯಾವಾಗ ಭಾಗ ಆಗಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ಮುದುಕಪ್ಪ ಈಗ ದೇಶಾಂತರ ಹೋಗಿರುತ್ತಾರೆ.

(ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.
(ಸಂಚಾರಿ ನ್ಯಾಯಾಲಯ ಕಾರಟಗಿ)